**ಕರ್ನಾಟಕ ಸರ್ಕಾರ**

**ಸಂಖ್ಯೆ:** ಸಿಐ 214 ಸಿಓಎಫ್ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 24.02.2023

**ಅಧಿಸೂಚನೆ**

ಕಬ್ಬು (ನಿಯಂತ್ರಣ) ಆದೇಶ, 1966ರ ಖಂಡ 3 ಮತ್ತು 11ರ ಹಾಗೂ ಆಹಾರ, ಕೃಷಿ ಸಮುದಾಯ ಅಭಿವೃದ್ಧಿ ಮತ್ತು ಸಹಕಾರ ಮಂತ್ರಾಲಯ (ಆಹಾರ ಇಲಾಖೆ) ಭಾರತ ಸರ್ಕಾರ, ನವದೆಹಲಿ ಇವರ ಅಧಿಸೂಚನೆ ಸಂಖ್ಯೆ: ಜಿಎಸ್‌ಆರ್ 1291/ಇಎಸ್‌ಎಸ್. ಸಿಓಎಂ/ ಸಕ್ಕರೆ ದಿನಾಂಕ:24ನೇ ಆಗಸ್ಟ್ 1967ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನಂತೆ ಆದೇಶಿಸಿದೆ. ಎಂದರೆ:-

**ಆದೇಶ**

1. **ಶೀರ್ಷಿಕೆ ಮತ್ತು ಪ್ರಾರಂಭ:-** (1)ರ ಈ ಆದೇಶವನ್ನು ಕರ್ನಾಟಕ ಸಕ್ಕರೆ (ಉತ್ಪಾದನೆಯ ನಿಯಂತ್ರಣ) ಆದೇಶ, 2022 ಎಂದು ಕರೆಯತಕ್ಕದ್ದು;
   (2) ಇದು ಸರ್ಕಾರಿ ರಾಜ್ಯಪತ್ರದಲ್ಲಿ ಅದರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು,
2. **ಪರಿಭಾಷೆಗಳು:-** (1) ಈ ಆದೇಶದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-
   **(ಎ) "ದ್ವಿಪಕ್ಷೀಯ ಕರಾರು"** ಎಂದರೆ ಕಾರ್ಖಾನೆಯ ಅಧಿಭೋಗದಾರ ಮತ್ತು ಕಬ್ಬನ್ನು ಸರಬರಾಜು ಮಾಡುವ ರೈತರ ನಡುವೆ ಮಾಡಲಾದ ಕರಾರು;
   **(ಬಿ) "ವಂತಿಗೆ"** ಎಂದರೆ ಸರ್ಕಾರದ ಪತ್ರ ಸಂಖ್ಯೆ: ಸಿಐ 173 ಎಸ್‌ಜಿಎಫ್ 2008 ದಿನಾಂಕ:08.04.2009ರ ಮೂಲಕ ನಿರ್ದಿಷ್ಟಪಡಿಸಿದಂತೆ ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗಾಗಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ವಂತಿಗೆ;
   **(ಸಿ) "ಜುಲ್ಮಾನೆ"** ಎಂದರೆ 4ನೇ ಖಂಡದ (5)ನೇ ಉಪಖಂಡದ ಅಡಿಯಲ್ಲಿ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಜುಲ್ಮಾನೆ;
   **(ಡಿ) "ನಮೂನೆ"** ಎಂದರೆ ಈ ಆದೇಶದೊಂದಿಗೆ ಲಗತ್ತಿಸಲಾದ ನಮೂನೆ;
   **(ಇ) "ಪರವಾನಗಿದಾರ"** ಎಂದರೆ 6ನೇ ಖಂಡದ ಅಡಿಯಲ್ಲಿ ಪರವಾನಗಿಯನ್ನು ಯಾರಿಗೆ ಮಂಜೂರು ಮಾಡಲಾಗಿದೆಯೋ ಆ ವ್ಯಕ್ತಿ;
   **(ಎಫ್) "ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ"** ಎಂದರೆ ಸರ್ಕಾರದ ಆದೇಶ ಸಂಖ್ಯೆ: ಸಿಐ 193 ಎಸ್‌ಜಿಎಫ್ 94 (ಭಾ) ಬೆಂಗಳೂರು, ದಿನಾಂಕ:08.10.2003ರ ಮೂಲಕ ಬೆಳಗಾವಿಯಲ್ಲಿ ಸ್ಥಾಪಿಸಲಾದ ಸಂಸ್ಥೆ; ಮತ್ತು
   **(ಜಿ) "ಕಬ್ಬು ಬಿಲ್ಲು"** ಎಂದರೆ ಕಬ್ಬು (ನಿಯಂತ್ರಣ) ಆದೇಶ, 1966ರ 3ನೇ ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ದರದ (ಎಫ್.ಆರ್.ಪಿ) ಪ್ರಕಾರ ಪೂರೈಕೆ ಮಾಡಲಾದ ಕಬ್ಬಿಗಾಗಿ ಕಾರ್ಖಾನೆಯು ರೈತರಿಗೆ ಪಾವತಿಸಿದ ಬಿಲ್ಲು,

   (2) ಈ ಆದೇಶದಲ್ಲಿ ಬಳಸಿದ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಕಬ್ಬು (ನಿಯಂತ್ರಣ) ಆದೇಶ, 1966ರ 2ನೇ ಖಂಡದಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;

3. **ಸಕ್ಕರೆ ಉತ್ಪಾದನೆಗಾಗಿ ಪರವಾನಗಿ:-** ಈ ಆದೇಶದ ಅಡಿಯಲ್ಲಿ ಮತ್ತು ಅದರನುಸಾರವಾಗಿರುವ ಹಾಗೂ ರಾಜ್ಯ ಸರ್ಕಾರವು ಆಯಾ ಉದ್ದೇಶಕ್ಕಾಗಿ ಹೊರಡಿಸಿದ ಪರವಾನಗಿಯಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳ ಹೊರತು ಕಬ್ಬಿನಿಂದ ಸಕ್ಕರೆಯನ್ನು ಉತ್ಪಾದಿಸತಕ್ಕದ್ದಲ್ಲ. ಎಲ್ಲಾ ನೋಂದಾಯಿತ ಅಥವಾ ಕಾರ್ಯನಿರತ ಸಕ್ಕರೆ ಕಾರ್ಖಾನೆಗಳು ಪ್ರತಿ ಕಬ್ಬು ಅರೆಯುವ ಹಂಗಾಮಿನ ಕೊನೆಯಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿಯ ಚಂದಾದಾರಿಕೆಯನ್ನು ಪಡೆದುಕೊಳ್ಳತಕ್ಕದ್ದು, ಅವರು ರಾಜ್ಯ ಸರ್ಕಾರವು

ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ದರದಲ್ಲಿ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ವಂತಿಗೆಯನ್ನು ಪಾವತಿಸತಕ್ಕದ್ದು.

4. **ಪರವಾನಗಿಯನ್ನು ಹೊರಡಿಸುವುದು ಮತ್ತು ನವೀಕರಿಸುವುದು:-** (1) ಉಪಖಂಡ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಾಖಲೆಗಳೊಂದಿಗೆ ಪ್ರತಿ ವರ್ಷದ ಮಾರ್ಚ್ 31ರೊಳಗಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರಿಗೆ ಪರವಾನಗಿ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ನಮೂನೆ-I ರಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಪರವಾನಗಿ ಶುಲ್ಕ, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ ವಂತಿಗೆ, ಕಬ್ಬು ಬಿಲ್ಲಿನ ಪಾವತಿಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು ಹಾಗೂ ತರುವಾಯ ಅವರು ಪ್ರತಿ ವರ್ಷದ ಮೇ 30ರೊಳಗಾಗಿ ಅರ್ಜಿಯನ್ನು ಮತ್ತು ದಾಖಲೆಗಳನ್ನು ಅದರ ವಿವರಣಾಂಶಗಳು ಮತ್ತು ಶಿಫಾರಸ್ಸುಗಳೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಪರವಾನಗಿ ಅರ್ಜಿಯು ಕೆಳಗೆ ನಿರ್ದಿಷ್ಟಪಡಿಸಲಾದ ಶುಲ್ಕದೊಂದಿಗಿರತಕ್ಕದ್ದು:-

| | | |
|---|---|---|
| (ಎ) | 5,000 ಟಿಸಿಡಿಯನ್ನು ಮೀರದ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ | ರೂ.50,000/- |
| (ಬಿ) | 5001 ಟಿಸಿಡಿ ಯಿಂದ 10,000 ಟಿ.ಸಿ.ಡಿಯವರೆಗೆ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ | ರೂ.1,00,000/- |
| (ಸಿ) | 10,001 ಟಿಸಿಡಿಯಿಂದ 15,000 ಟಿಸಿಡಿಯವರೆಗೆ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ | ರೂ.1,50,000/- |
| (ಡಿ) | 15,000 ಟಿಸಿಡಿಯನ್ನು ಮೀರಿದ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಕಾರ್ಖಾನೆಗಳಿಗಾಗಿ | ರೂ.2,00,000/- |

ಪರಂತು ಈ ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ವಾರ್ಷಿಕ ದರಗಳಲ್ಲಿ ಒಂದು, ಮೂರು ಅಥವಾ ಐದು ವರ್ಷಗಳ ಅವಧಿಗಾಗಿ ಪರವಾನಗಿಯನ್ನು ಮಂಜೂರು ಮಾಡಲು ಅಥವಾ ನವೀಕರಿಸಲು ಅರ್ಜಿಯನ್ನು ಸಲ್ಲಿಸಬಹುದು.

(2) ಉಪಖಂಡ (1)ರ ಮೇರೆಗೆ ಪಾವತಿಸಬೇಕಾದ ಶುಲ್ಕವನ್ನು ಸೂಕ್ತ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸರ್ಕಾರಿ ಖಜಾನೆಗೆ ಪಾವತಿಸತಕ್ಕದ್ದು ಮತ್ತು ಚಲನ್-ಅನ್ನು ಪರವಾನಗಿ ಅರ್ಜಿಯೊಡನೆ ಈ ಕೆಳಕಂಡ ದಸ್ತಾವೇಜುಗಳೊಂದಿಗೆ ಲಗತ್ತಿಸಿರತಕ್ಕದ್ದು, ಎಂದರೆ:-

(i) ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಮಾಡಲಾದ ವಂತಿಗೆಗೆ ಸಂಬಂಧಿಸಿದ ರಸೀದಿ;

(ii) ಪರವಾನಗಿ ಅರ್ಜಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪಡೆದ ಸಿಂಧುವಾದ ಅನುಮತಿ ಪತ್ರವನ್ನು ಸಲ್ಲಿಸತಕ್ಕದ್ದು;

(iii) ಮಾಡಲಾದ ದ್ವಿಪಕ್ಷೀಯ ಕರಾರಿನ ಕ್ರೋಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು; ಮತ್ತು

(iv) ಹಿಂದಿನ ಹಂಗಾಮುಗಳಲ್ಲಿ ಕಾರ್ಖಾನೆಗೆ ಕಬ್ಬನ್ನು ಪೂರೈಸಿದ ರೈತರಿಗೆ ಕಾರ್ಖಾನೆಯ ಅಧಿಭೋಗದಾರನು ಪೂರ್ತಿಯಾಗಿ ಪಾವತಿಸಿದ ಕಬ್ಬು ಬಿಲ್ಲಿನ ಕುರಿತಾದ ಕ್ರೋಢೀಕೃತ ದಾಖಲೆ.

(1) ಅರ್ಜಿಯನ್ನು ಸ್ವೀಕರಿಸಿದ ಮೇಲೆ, ರಾಜ್ಯ ಸರ್ಕಾರವು ಅದು ಅಗತ್ಯವೆಂದು ಭಾವಿಸುವಂಥ ವಿಚಾರಣೆಯ ತರುವಾಯ, ಪರವಾನಗಿಯನ್ನು ಮಂಜೂರು ಮಾಡಬಹುದು ಅಥವಾ ಸಂದರ್ಭಾನುಸಾರವಾಗಿ ನವೀಕರಿಸಬಹುದೆಂದು ಮನಗಂಡಲ್ಲಿ ಕಬ್ಬು ಅರೆಯುವ ಹಂಗಾಮಿನ ಆರಂಭಕ್ಕೆ ಮೊದಲು ನಮೂನೆ-II ರಲ್ಲಿ ಪರವಾನಗಿಯನ್ನು ಮಂಜೂರು ಮಾಡಬಹುದು ಅಥವಾ ನವೀಕರಿಸಬಹುದು, ಮತ್ತು ಹೊರಡಿಸುವ ದಿನಾಂಕವನ್ನು ಅನುಸರಿಸಿ ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ವಿಧಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಪರವಾನಗಿಯು ಆ ವರ್ಷದ ಜೂನ್ 30ರವರೆಗೆ ಸಿಂಧುವಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ ಪರವಾನಗಿ ಮಂಜೂರಾತಿಯನ್ನು ಅಥವಾ ನವೀಕರಣವನ್ನು ತಿರಸ್ಕರಿಸಬಹುದು.

(3) ಪರವಾನಗಿಯು ನವೀಕರಣಗೊಳ್ಳದಿರುವ ಸಂದರ್ಭದಲ್ಲಿ ಸಂಬಂಧಿತ ಕಬ್ಬು ಅರೆಯುವ ಹಂಗಾಮಿನ ಪ್ರಾರಂಭಕ್ಕೂ ಮೊದಲು ಕಾರ್ಖಾನೆಯ ಅಧಿಭೋಗದಾರನು ರೂ.50,000/-ಗಳ ಜುಲ್ಮಾನೆಯನ್ನು

ಪಾವತಿಸಲು ಹೊಣೆಗಾರನಾಗಿರತಕ್ಕದ್ದು ಹಾಗೂ ಅಂಥ ಜುಲ್ಮಾನೆಯನ್ನು ಸೂಕ್ತ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸರ್ಕಾರಿ ಖಜಾನೆಗೆ ಪಾವತಿಸತಕ್ಕದ್ದು:

ಪರಂತು ಕಾರ್ಖಾನೆಯ ಅಧಿಭೋಗದಾರನು 2022-23ನೇ ಹಂಗಾಮಿನ ಕೊನೆಯಲ್ಲಿ ಒಂದು ಬಾರಿಯ ಕ್ರಮವಾಗಿ (One Time masure) ಬಾಕಿಯಿರುವ ಯಾವುದೇ ಜುಲ್ಮಾನೆಯನ್ನು ಪಾವತಿಸುವ ಅಗತ್ಯವಿರುವುದಿಲ್ಲ;

ಮತ್ತು ಪರಂತು 2022-23ರ ಹಂಗಾಮಿನ ಕೊನೆಯಲ್ಲಿ ಬಾಕಿಯಿರುವ ಪರವಾನಗಿ ಅರ್ಜಿಯ ಶುಲ್ಕವು, ಮೊದಲು ನಿರ್ದಿಷ್ಟಪಡಿಸಿದಂತೆ ಹಿಂದಿನ ದರಗಳಲ್ಲಿರತಕ್ಕದ್ದು ಹಾಗೂ ಪರಿಷ್ಕೃತ ದರಗಳು 2022-23ರ ಹಂಗಾಮಿನ ಕೊನೆಯಲ್ಲಿ ಬಾಕಿಯಿರುವ ಪರವಾನಗಿ ನವೀಕರಣಕ್ಕಾಗಿ ಅನ್ವಯವಾಗತಕ್ಕದ್ದು;

5. **ಪರವಾನಗಿಯ ಅಮಾನತು ಅಥವಾ ರದ್ದತಿ:-** (1) ಪರವಾನಗಿದಾರನು ಈ ಆದೇಶದ ಯಾವುದೇ ಉಪಬಂಧಗಳನ್ನು ಅಥವಾ ಪರವಾನಗಿ ಮಂಜೂರಾತಿಯ ಷರತ್ತುಗಳನ್ನು ಉಲ್ಲಂಘಿಸಿರುವನೆಂದು ರಾಜ್ಯ ಸರ್ಕಾರವು ಮನಗಂಡರೆ, ಅವಶ್ಯಕ ಸರಕುಗಳ ಅಧಿನಿಯಮ, 1955(1955ರ ಕೇಂದ್ರ ಅಧಿನಿಯಮ 10)ರ ಅಡಿಯಲ್ಲಿ ಅಂಥ ಉಲ್ಲಂಘನೆಯ ಸಂಬಂಧದಲ್ಲಿ ವಿಧಿಸಬಹುದಾದ ಯಾವುದೇ ದಂಡನೆಗೆ ಭಾಧಕವಾಗದಂತೆ, ಪರವಾನಗಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಪರವಾನಗಿಯನ್ನು ಅಮಾನತ್ತುಪಡಿಸಬಹುದು ಅಥವಾ ರದ್ದುಗೊಳಿಸಬಹುದು.

(1) ಈ ಖಂಡದಡಿಯಲ್ಲಿ ಅಮಾನತ್ತುಪಡಿಸಲಾದ ಅಥವಾ ರದ್ದುಗೊಳಿಸಲಾದ ಪರವಾನಗಿಯ ಪರವಾನಗಿದಾರನು ಅಂಥ ಅಮಾನತ್ತು ಅಥವಾ ರದ್ದತಿಯಿಂದ ಉಂಟಾದ ಯಾವುದೇ ನಷ್ಟ ಅಥವಾ ಹಾನಿಯ ಆಧಾರದ ಮೇಲೆ ರಾಜ್ಯ ಸರ್ಕಾರದಿಂದ ಯಾವುದೇ ನಷ್ಟ ಪರಿಹಾರಕ್ಕೆ ಅಥವಾ ಅಂಥ ಪರವಾನಗಿಯ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಪಾವತಿಸಿದ ಯಾವುದೇ ಶುಲ್ಕದ ಮರುಪಾವತಿಗೆ ಅರ್ಹನಾಗತಕ್ಕದ್ದಲ್ಲ.

**6.ನಿರಸನ ಮತ್ತು ಉಳಿಸುವಿಕೆಗಳು**:- ಕರ್ನಾಟಕ ಸಕ್ಕರೆ (ಉತ್ಪಾದನಾ ನಿಯಂತ್ರಣ) ಆದೇಶ, 1975ನ್ನು ಈ ಮೂಲಕ ನಿರಸನಗೊಳಿಸಿದೆ:

ಪರಂತು, ಅಂಥ ನಿರಸನವು,-

(a) (ಎ) ಸದರಿ ಆದೇಶಗಳ ಹಿಂದಿನ ಕಾರ್ಯಾಚರಣೆಯಲ್ಲಿ ಅಥವಾ ಏನೇ ಯುಕ್ತವಾಗಿ ಕೈಗೊಂಡ ಕ್ರಮಕ್ಕೆ ಅಥವಾ ಅದರಡಿಯಲ್ಲಿ ಅನುಭವಿಸಿದ ಯಾವುದಕ್ಕೂ; ಅಥವಾ

(ಬಿ) ಸದರಿ ಆದೇಶಗಳ ಅಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ, ಭರಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಗೆ ಪರಿಣಾಮಕಾರಿಯಾಗತಕ್ಕದ್ದಲ್ಲ.

(ii) ಉಪಖಂಡ (i)ರಡಿಯಲ್ಲಿ ನಿರಸನಗೊಳಿಸಲಾದ ಆದೇಶಗಳ ಯಾವುದೇ ಉಲ್ಲೇಖವು ಈ ಆದೇಶದ ಉಲ್ಲೇಖದಂತೆ ಅರ್ಥೈಸಿಕೊಳ್ಳತಕ್ಕದ್ದು.

(iii) ಉಪಖಂಡ (i)ರ ಮೂಲಕ ನಿರಸನಗೊಂಡ ಆದೇಶಗಳಡಿಯಲ್ಲಿ ಪ್ರಾರಂಭಿಸಲಾದ ಮತ್ತು ಈ ಆದೇಶವು ಪ್ರಾರಂಭಗೊಂಡ ದಿನಾಂಕದಂದು ಬಾಕಿಯಿರುವ ಎಲ್ಲಾ ವ್ಯವಹರಣೆಗಳು ಮುಂದುವರೆಯತಕ್ಕದ್ದು ಹಾಗೂ ಈ ಆದೇಶದ ಉಪಬಂಧಗಳ ಅನುಸಾರವಾಗಿ ವಿಲೆಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಶಾಂತಾರಾಮ)**
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

# ನಮೂನೆ I

(4ನೇ ಖಂಡದ (1)ನೇ ಉಪಖಂಡವನ್ನು ನೋಡುವುದು)

**ಕಬ್ಬಿನಿಂದ ಸಕ್ಕರೆ ಉತ್ಪಾದನೆಗಾಗಿ ಪರವಾನಗಿ ಪಡೆಯಲು**
**ಅಥವಾ ಅದರ ನವೀಕರಣಕ್ಕಾಗಿ ಅರ್ಜಿ**

(ತ್ರಿಪ್ರತಿಗಳಲ್ಲಿ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಸಲ್ಲಿಸತಕ್ಕದ್ದು)

1. ಹೆಸರು, ಪೋಷಕ ಸಂಸ್ಥೆ, ನಿವಾಸ ಮತ್ತು ಅರ್ಜಿದಾರರ ವ್ಯವಹಾರಿಕ ಸ್ಥಳ:

ಎ. ಸಂಸ್ಥೆಯಾದಲ್ಲಿ, ಹೆಸರು ಮತ್ತು ಪಾಲುದಾರರ ವಿಳಾಸ ಮತ್ತು ಸಂಸ್ಥೆಯ ವ್ಯವಹಾರಿಕ ಸ್ಥಳ:

ಬಿ. ಭಾರತೀಯ ಕಂಪನಿಗಳ ಕಾಯ್ದೆ, 1956ರಡಿಯಲ್ಲಿ ನೋಂದಾಯಿಸಿದ ಕಂಪನಿಯ ಸಂದರ್ಭದಲ್ಲಿ ಹೆಸರು ಮತ್ತು ನಿರ್ದೇಶಕರ ಹೆಸರುಗಳು ಮತ್ತು ವಿಳಾಸದೊಂದಿಗೆ ನೋಂದಾಯಿತ ಕಚೇರಿಯ ವಿಳಾಸ ಮತ್ತು ವ್ಯವಸ್ಥಾಪಕ ನಿರ್ದೇಶಕ, ಕಾರ್ಯದರ್ಶಿ ಮತ್ತು ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹೆಸರು ಮತ್ತು ವಿಳಾಸ:

2. ಕಾರ್ಖಾನೆಯ ಸ್ಥಳ:

(ಎ) ಗ್ರಾಮ ಅಥವಾ ಪಟ್ಟಣ
(ಬಿ) ತಾಲ್ಲೂಕು
(ಸಿ) ಜಿಲ್ಲೆ
(ಡಿ) ಹತ್ತಿರದ ರೈಲ್ವೆ ನಿಲ್ದಾಣ

3. ಹಿಂದಿನ ಮೂರು ಹಂಗಾಮುಗಳಲ್ಲಿ ಕಬ್ಬು ನುರಿಸಿರುವ ಪ್ರಮಾಣ.

4. ಹಿಂದಿನ ಮೂರು ಹಂಗಾಮುಗಳಲ್ಲಿ ಕಾರ್ಖಾನೆಯ ಕಬ್ಬು ನುರಿಸಿರುವ ದಿನಗಳ ಸಂಖ್ಯೆ

5. ಜಿಲ್ಲೆ ಅಥವಾ ಉಪ ಖಜಾನೆಯಲ್ಲಿ (ಕೆ2/ಖಜಾನೆ ಚಲನ್/ ಆನ್‌ಲೈನ್ ಪಾವತಿಯಾದಲ್ಲಿ ಬ್ಯಾಂಕ್ ರಸೀದಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು) ಶುಲ್ಕ ಭರ್ತಿ ಮಾಡಿದ ಚಲನ್ ಸಂಖ್ಯೆ ಮತ್ತು ದಿನಾಂಕ.

6. ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ಪಾವತಿಸಿದ ರಸೀದಿ ಸಂಖ್ಯೆ ಮತ್ತು ದಿನಾಂಕ (ರಸೀದಿಯ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು).

7. ಪರವಾನಿಗೆ ನವೀಕರಣ ಸಂಖ್ಯೆ ಮತ್ತು ದಿನಾಂಕ (ಅರ್ಜಿಗಳ ನವೀಕರಣ ಸಂದರ್ಭದಲ್ಲಿ).

8. ನವೀಕರಣ: ಅವಧಿ ಒಂದು ವರ್ಷ ಅಥವಾ ಮೂರು ವರ್ಷ ಅಥವಾ ಐದು ವರ್ಷ

ಅರ್ಜಿದಾರರ ಪರವಾಗಿ ಸಹಿ ಮಾಡಲು ಅಧಿಕಾರವುಳ್ಳ
ಅಧಿಕಾರಿಯ ಸಹಿ

ಸ್ಥಳ:
ದಿನಾಂಕ:

ಹುದ್ದೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## ನಮೂನೆ II

(4ನೇ ಖಂಡದ (3)ನೇ ಉಪಖಂಡವನ್ನು ನೋಡುವುದು)

## ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
## ನಿರ್ವಾತ ಪಾನ್ ಪ್ರಕ್ರಿಯೆ (Vacuum Pan Process) ಮೂಲಕ ಕಬ್ಬಿನಿಂದ ಸಕ್ಕರೆಯನ್ನು ಉತ್ಪಾದನೆಗಾಗಿ ಪರವಾನಗಿ

ಈ ಪರವಾನಗಿಯನ್ನು.................... (ಸ್ಥಳ) ಇಲ್ಲಿನ ........................................(ಕಾರ್ಖಾನೆಯ ಹೆಸರು) ಅಧಿಭೋಗದಾರನಾದ......................ಇವರಿಗೆ .......................... ಈ ಕಾರ್ಖಾನೆಯಲ್ಲಿ ಕಬ್ಬಿನಿಂದ ಸಕ್ಕರೆ ಉತ್ಪಾದಿಸಲು ಇಲ್ಲಿ ಉಲ್ಲೇಖಿಸಲಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ನೀಡಲಾಗಿದೆ.

### ನಿಯಮಗಳು ಮತ್ತು ಷರತ್ತುಗಳು

1. ಈ ಪರವಾನಗಿಯನ್ನು ಸಂಬಂಧಪಟ್ಟ ಕೈಗಾರಿಕೆಗಳ ಆವರಣಗಳ ಕೆಲವು ಸ್ಪಷ್ಟ ಎದ್ದು ಕಾಣುವ ಜಾಗದಲ್ಲಿ ಪ್ರದರ್ಶಿಸುವುದು.

2. ಭಾರತ ಸರ್ಕಾರ ಅಥವಾ ಕರ್ನಾಟಕ ಸರ್ಕಾರ ಅಥವಾ ಸಕ್ಕರೆ (ನಿಯಂತ್ರಣ) ಆದೇಶ 1966ರ ಅಡಿಯಲ್ಲಿ ಪ್ರಾಧಿಕರಿಸಿದ ಯಾವೊಬ್ಬ ಅಧಿಕಾರಿಯು ಸಾಮಾನ್ಯ ಅಥವಾ ಅಗತ್ಯ ವಸ್ತುಗಳ ಅಧಿನಿಯಮ, 1955ರ (Eseential Commodities Act, 1955) ಅಥವಾ ಅದರಡಿಯಲ್ಲಿ ಹೊರಡಿಸಿರುವ ಯಾವುದೇ ಆದೇಶದ ಉಪಬಂಧಗಳಡಿಯಲ್ಲಿ ನೀಡಬಹುದಾದ ಯಾವುದೇ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ನು ಪರವಾನಗಿದಾರನು ಪಾಲಿಸತಕ್ಕದ್ದು.

3. ಈ ಪರವಾನಗಿ, ಯಾವುದೇ ಆದೇಶದ ಪ್ರಕಾರ ಮೊದಲೇ ರದ್ದುಗೊಳಿಸದ ಹೊರತು, 1ನೇ ಜುಲೈ.......ರಿಂದ 30 ನೇ ಜೂನ್........ರವರೆಗೆ ಒಂದು ವರ್ಷ ಅಥವಾ ಮೂರು ವರ್ಷ ಅಥವಾ ಐದು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ.

4. ಈ ಪರವಾನಗಿಯನ್ನು ಕೈಗಾರಿಕೆಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1951 ರ ಅಡಿಯಲ್ಲಿ ಪರವಾನಗಿಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಬಾಧಕವಾಗದಂತೆ ಮಂಜೂರು ಮಾಡಲಾಗಿದೆ.

ದಿನಾಂಕ:

ಸರ್ಕಾರದ ಅಧೀನ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಆದೇಶನುಸಾರ ಮತ್ತು ಇತರೆ.......

**PR-295**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೬.

SUNIL GARDE